# ಖನ್ನೂರ ವಿದ್ಯಾನಿಕೇತನ ಸ್ಕೂಲ್, ರಾಣೆಬೆನ್ನೂರ

## ಮೊದಲನೆಯ ಆವರ್ತಕ ಪರೀಕ್ಷೆ ಆಗಸ್ಟ್ -೨೦೨೦

ತರಗತಿ : ೬ ವಿಷಯ : ದ್ವಿತೀಯ ಭಾಷೆ ಕನ್ನಡ ಅಂಕಗಳು : ೨೦

**(Use KANNADA H W Note Book to ANSWER)**

ವಿಭಾಗ – ಎ (ವಾಚನ ಮತ್ತು ಗ್ರಹಿಕಾ ಕೌಶಲ) : ೪ ಅಂಕಗಳು

೧) ಈ ಗದ್ಯಭಾಗ ಓದಿಕೊಂಡು ಅದರ ಕೆಳಗಿನ ಪ್ರಶ್ನೆಗಳಿಗೆ ಉತ್ತರಿಸಿರಿ:

ಬೇಡನೊಬ್ಬ ಪಕ್ಷಿಗಳನ್ನು ಹಿಡಿಯಲು ಕಾಳು ಹಾಕಿ ಬಲೆ ಹರಡಿದ್ದನು. ಕಾಳಿನ ಆಸೆಗಾಗಿ ಪಾರಿವಾಳಗಳು ಪುರ್ರ್ ಎಂದು ಹಾರಿ ಬಂದವು. ಅವು ಕಾಳು ತಿನ್ನುತ್ತ ತಿನ್ನುತ್ತ ಬಲೆಯಲ್ಲಿ ಸಿಕ್ಕಿಕೊಂಡವು. ಪಾರಿವಾಳಗಳು ಬಲೆಯಿಂದ ಬಿಡಿಸಿಕೊಳ್ಳಲು ಹೆಣಗಾಡಿದವು. ಆದರೆ ಸಾಧ್ಯವಾಗಲಿಲ್ಲ. ಅದೇ ಸಮಯಕ್ಕೆ ಕಾಗೆಯೊಂದು ಅದೇ ದಾರಿಯಲ್ಲಿ ಹಾರಿಹೋಗುತ್ತಿತ್ತು. ಅದು ಬಲೆಗೆ ಸಿಕ್ಕಿಬಿದ್ದಿದ್ದ ಪಾರಿವಾಳಗಳನ್ನು ನೋಡಿ ಮರುಗಿತು. ಪಾರಿವಾಳಗಳು ಕಾಗೆಯ ಸಹಾಯ ಬೇಡಿದವು. ಕಾಗೆ ಅವುಗಳಿಗೆ 'ಒಗ್ಗಟ್ಟಿನಲ್ಲಿ ಬಲವಿದೆ, ಎಲ್ಲರೂ ಕೂಡಿ ಒಮ್ಮೆಲೆ ಹಾರಿಬಿಡಿ' ಎಂದು ಹುರಿದುಂಬಿಸಿತು. ಪಾರಿವಾಳಗಳು ಪ್ರಯತ್ನ ಮಾಡಿ ಒಮ್ಮೆಲೆ ಬಲೆಸಹಿತ ಮೇಲೆ ಹಾರಿದವು.

ಪಾರಿವಾಳಗಳು ಬಲೆಸಹಿತ ಬೆಟ್ಟದ ಸಮೀಪ ಇಳಿದವು. ಇಲಿಗಳ ಸಹಾಯ ಬೇಡಿದವು. ಇಲಿಗಳು ತಮ್ಮ ಹಲ್ಲುಗಳಿಂದ ಬಲೆಯನ್ನು ಕತ್ತರಿಸಿದವು. ಹೀಗೆ ಪಾರಿವಾಳಗಳು ಅಪಾಯದಿಂದ ಪಾರಾದವು. ಅವುಗಳು ಕಾಗೆ ಮತ್ತು ಇಲಿಗಳಿಗೆ ಧನ್ಯವಾದ ಹೇಳಿ ಪುರ್ರನೆ ಹಾರಿಹೋದವು.

ಪ್ರಶ್ನೆಗಳು:
೧. ಬೇಡನು ಬಲೆಯನ್ನು ಏಕೆ ಬೀಸಿದನು? ೧
೨. ಬೇಡನು ಪಾರಿವಾಳಗಳಿಗೆ ಯಾವ ಆಸೆ ತೋರಿಸಿದ್ದನು? ೧
೩. ಪಾರಿವಾಳಗಳು ಬಲೆಯಿಂದ ಬಿಡಿಸಿಕೊಳ್ಳಲು ಏನು ಮಾಡಿದವು? ೧
೪. ಕಾಗೆಯು ಪಾರಿವಾಳಗಳಿಗೆ ಏನೆಂದು ಹುರಿದುಂಬಿಸಿತು? ೧

ವಿಭಾಗ –ಬಿ (ಬರವಣಿಗೆಯ ಕೌಶಲ) : ೩ ಅಂಕಗಳು

೨) ನಿಮ್ಮ ಮಾವ'ನ ಮದುವೆಗೆ ಎರಡು ದಿನದ ರಜೆ ಕೋರಿ ನಿಮ್ಮ ಪ್ರಾಚಾರ್ಯರಿಗೆ ಒಂದು ಪತ್ರ ಬರೆಯಿರಿ:

ವಿಭಾಗ – ಸಿ (ಅನ್ವಯಿಕ ವ್ಯಾಕರಣ) : ೬ ಅಂಕಗಳು

೩) ಈ ಕೆಳಗಿನ ಪ್ರಶ್ನೆಗಳಿಗೆ ಸೂಚನೆಯಂತೆ ಉತ್ತರ ಬರೆಯಿರಿ:

೧) ಈ ಪದಗಳನ್ನು ಬಿಡಿಸಿ, ಸಂಧಿಯ ಹೆಸರು ತಿಳಿಸಿ: ೪
೧) ಚಳಿಗಾಲ ೨) ಬೇರೊಬ್ಬ ೩) ಮನೆಯನ್ನು ೪) ಊರೂರು

೨) ಈ ಪದಗಳಿಗೆ ವಿರುದ್ಧ ಪದಗಳನ್ನು ಬರೆಯಿರಿ: ೧
೧) ಸ್ವರ್ಗ ೨) ಭಯ

೩) ಈ ಪದಗಳ ವಚನ ಬದಲಿಸಿ ಬರೆಯಿರಿ: ೧
೧) ಪುಸ್ತಕ ೨) ಶಾಲೆಗಳು

ವಿಭಾಗ – ಡಿ (ಪಠ್ಯಗಳ ಅಧ್ಯಯನ) : ೭ ಅಂಕಗಳು

೪) ಕೊಟ್ಟಿರುವ ಪ್ರತಿಯೊಂದು ಪ್ರಶ್ನೆಗಳಿಗೆ ಒಂದೊಂದು ವಾಕ್ಯದಲ್ಲಿ ಉತ್ತರಿಸಿ:
೧) ರಾಜೇಂದ್ರ ಪ್ರಸಾದರು ತಾವು ಯಾರ ಸೇವಕ ಎಂದು ಹೇಳಿಕೊಳ್ಳುತ್ತಿದ್ದರು? ೧
೨) ಪುಸ್ತಕದ ಪುಟಗಳನ್ನು ಹರಿದ ಮಕ್ಕಳಿಗೆ ಪ್ರಸಾದರು ಏನನ್ನು ಕೊಟ್ಟರು? ೧
೩) ಜಾಮಿಯಾ ಮಿಲಿಯಾ ಎಲ್ಲಿದೆ? ೧

೫) ಕೊಟ್ಟಿರುವ ಪ್ರತಿಯೊಂದು ಪ್ರಶ್ನೆಗಳಿಗೆ ಎರಡು-ಮೂರು ವಾಕ್ಯಗಳಲ್ಲಿ ಉತ್ತರಿಸಿ:
೧) ರಾಜೇಂದ್ರ ಪ್ರಸಾದ್ ಅವರ ವ್ಯಕ್ತಿತ್ವವನ್ನು ವಿವರಿಸಿರಿ. ೨
೨) ವಿದ್ಯಾರ್ಥಿಗಳಿಗೆ ಬುದ್ಧಿ ಕಲಿಸಲು ಜಾಕಿರ್‌ಹುಸೇನ್ ಏನು ಮಾಡಿದರು? ೨

*****

SEND THE PHOTO or PDF of this ANSWER SHEET to

HANUMANTAPPA M K Sir on 8197183534 or 8660443218